ಗಿಡಗಳು ಸಸ್ಯಗಳೇ!

ಕ್ಲೈಡ ರಾಬರ್ಟ ಬುಲ್ಲಾ

ಚಿತ್ರಃ ಲುಇ ಲಿನೆಲ್

ಹೂವುಗಳು ಸಸ್ಯಗಳು. ತರಕಾರಿಗಳು ಸಸ್ಯಗಳು. ಇವೆಲ್ಲ ನಮಗೆ ತಿಳಿದ ವಸ್ತುಗಳು. ಆದರೆ ವರ್ಷಾನುವರುಷ ಅವು ತಮ್ಮ ಜೀವನಚಕ್ರವನ್ನು ಕಳೆಯುತ್ತಿರುವ ಗಿಡ ಮರಗಳು ಸಸ್ಯಗಳೆಂದು ನಮಗೆ ತಿಳಿದಿರಲಾರದು.

ಕ್ಲೈಡ ರಾಬರ್ಟ ಬುಲ್ಲಾ ಇವರು ಈ ಪುಸ್ತಕದಲ್ಲಿ ಗಿಡ ಮರಗಳ ಬಗ್ಗೆ ಮಕ್ಕಳಲ್ಲಿರುವ ಕುತೂಹಲವನ್ನು ವರ್ಣಿಸಿದ್ದಾರೆ. ಅವರು ಗಿಡಗಳ ಬಗ್ಗೆ ಇರುವ ಸಂವೇದನೆಯನ್ನು ಮತ್ತು ಅವುಗಳ ಬಗ್ಗೆ ಇರುವ ರುಚಿಯನ್ನು ವ್ಯಕ್ತಪಡಿಸಿದ್ದಾರೆ.

ಅವರು ಸೇಬು ಗಿಡದ ಬೀಜದಿಂದ ಹೂವು-ಹಣ್ಣುಗಳವರೆಗಿರುವ ಅದರ ಜೀವನಚಕ್ರವನ್ನು ಬಣ್ಣಿಸಿದ್ದಾರೆ.

ಲುಇ ಲಿನೆಲ್ ಇವರ ಚಿತ್ರಗಳು ತಾಜಾ, ಪ್ರಸನ್ನಗೊಳಿಸುವ ಮಾಹಿತಿ ಕೊಡುವ ಬುಲ್ಲಾ ಇವರ ವರ್ಣನೆಗೆ ಪೂರಕವಾಗಿವೆ.

ಮಕ್ಕಳಿಗಾಗಿ ಪುಸ್ತಕಗಳು ಹೇಗಿರಬೇಕು ಎಂಬುದು ತಿಳಿದು ಬರುತ್ತದೆ.

ಕ್ಲೈಡ ರಾಬರ್ಟ ಬುಲ್ಲಾ

ಚಿತ್ರ: ಲುಇ ಲಿನೆಲ್

ಕನ್ನಡಕ್ಕೆ ಪ್ರಭಾಕರ ನಾನಾವಟಿ

ಗಿಡಗಳು ಸಸ್ಯಗಳೇ!

ಗಿಡವು ಒಂದು ಸಸ್ಯವು
ಗಿಡವು ದೊಡ್ಡದಾಗಿ ಬೆಳೆಯುವ ಸಸ್ಯವು.

ಎಷ್ಟೋ ಗಿಡಗಳು ಬೀಜಗಳಿಂದಲೇ ಚಿಕ್ಕ
ತರಕಾರಿಗಳಂತೆ ಬೆಳೆಯುತ್ತವೆ.
ಎಷ್ಟೋ ಪ್ರಕಾರಗಳ ಗಿಡಗಳು ಇವೆ.
ಇಲ್ಲಿ ಕೆಲ ಗಿಡಗಳಿವೆ.
ನಿಮಗೆ ಎಷ್ಟು ಗಿಡಗಳ ಪರಿಚಯವಿದೆ?



ಈ ಗಿಡ ಹಳ್ಳಿಗಳಲ್ಲಿ ಬೆಳೆಯುತ್ತದೆ.
ನಿಮ್ಮ ಮನೆಯ ಅಂಗಳದಲ್ಲಿ ಇಲ್ಲವೆ ಹಿತ್ತಲಲ್ಲಿ ಕೂಡ ಬೆಳೆಯಬಹುದು.
ಇದು ಯಾವ ಗಿಡವು ಎಂಬುದು ಗೊತ್ತೇ?
ಇದು ಸೇಬು ಗಿಡ.



ಸೇಬು ಗಿಡವು ಬೀಜದಿಂದ ಹೊರಬರುತ್ತದೆ.
ಇದರ ಬೀಜಗಳು ಚಿಕ್ಕದಾಗಿರುತ್ತವೆ.
ಸೇಬು ಹಣ್ಣಿನಲ್ಲಿ ಬೀಜಗಳು ಇರುತ್ತವೆ.
ನೀವು ಸೇಬು ಹಣ್ಣಿನ ಬೀಜ ನೋಡಿರುವಿರಾ?

ಸೇಬು ಹಣ್ಣಿನ ಎರಡು ಹೋಳುಗಳನ್ನು ಮಾಡಿ.
ಬೀಜಗಳು ಮಧ್ಯದಲ್ಲಿವೆ.
ಅವು ಹೀಗೆ ಕಾಣುತ್ತವೆ.

ಸೇಬು ಬೀಜಗಳನ್ನು ಬಿತ್ತಿದ ನಂತರ ಸೇಬು ಗಿಡಗಳು ಬೆಳೆಯುತ್ತವೆ.
ಕೆಲವು ಸಲ ಗಿಡಗಳ ಮೇಲಿನ ಹಣ್ಣುಗಳಿಂದ ಬೀಜಗಳು ಹೊರಬಿದ್ದು ಗಿಡಗಳು ಬೆಳೆಯುತ್ತವೆ.

ಗಾಳಿಯು ಈ ಬೀಜಗಳ ಮೇಲೆ ಎಲೆಗಳನ್ನು ಹಾರಿಸುತ್ತದೆ.
ಗಾಳಿಯು ಈ ಬೀಜಗಳ ಮೇಲೆ ಮಣ್ಣನ್ನು ಹಾರಿಸುತ್ತದೆ.

ಚಳಿಗಾಲದಲ್ಲಿ ಬೀಜಗಳೆಲ್ಲ ಎಲೆಗಳ ಕೆಳಗೆ ಇಲ್ಲವೆ ಮಣ್ಣಿನ ಕೆಳಗೆ ಇರುತ್ತವೆ.
ಚಳಿಗಾಲದಲ್ಲಿ ಬೀಜಗಳೆಲ್ಲ ಹಿಮಗಳ ಕೆಳಗೆ ಇದ್ದು ಭೂಮಿಯ ಕೆಳಗೆ ನೂಕಲ್ಪಡುತ್ತವೆ. .

ಮಳೆಗಾಲವು ಬರುತ್ತದೆ.
ಮಳೆ ಬೀಳುತ್ತದೆ.



ಸೂರ್ಯನ ಬಿಸಿಲು ಭೂಮಿಯನ್ನು ಬಿಸಿ ಮಾಡುತ್ತದೆ.
ಬೀಜಗಳು ಬೆಳೆಯುತ್ತವೆ.

ಮೊದಲಿಗೆ ಬೀಜದಿಂದ ಹೊರಬಿದ್ದ ಈ ಚಿಕ್ಕ
ಸಸ್ಯಗಳು ಗಿಡಗಳಂತೆ ಕಾಣುವದಿಲ್ಲ.
ಇವು ಬಹು ಚಿಕ್ಕ ಗಿಡಗಳು.
ಕಾಂಡದಿಂದ ಎರಡೇ ಎಲೆಗಳು ಚಿಗುರಿದ್ದದ್ದು
ಕಾಣುತ್ತವೆ.

ಇದರಲ್ಲಿ ಸೇಬು ಇಲ್ಲ.
ಗಿಡವು ದೊಡ್ಡದಾಗಿ ಬೆಳೆದ
ಮೇಲೆಯೇ ಹಣ್ಣಗಳು ಬರುವವು.



ಪ್ರತಿ ವರುಷ ಗಿಡವು ಬೆಳೆಯುತ್ತದೆ. ಅದು
ಎತ್ತರವಾಗುತ್ತ ಹೋಗುತ್ತದೆ.

ಏಳು ವರುಷಗಳಲ್ಲಿ ಗಿಡವು ಎತ್ತರವಾಗಿ
ಬೆಳೆದು ಅದರ ಟೊಂಗೆಗಳ ಕೆಳಗೆ ನಾವು
ನಿಲ್ಲಬಹುದು.
ಬಿಸಿಲುಗಾಲದಲ್ಲಿ ಗಿಡದ ಮೇಲೆ ಮೊಗ್ಗೆಗಳು
ಕಾಣುವವು. ಬಿಸಿಲುಗಾಲವೇ ಸೇಬು ಗಿಡಗಳ
ಮೊಗ್ಗೆಯ ಕಾಲ.



ಮೊಗ್ಗೆಗಳು ಕೆಲವೇ ದಿನಗಳಿರುತ್ತವೆ.
ಆ ಮೇಲೆ ಅವು ನೆಲದ ಮೇಲೆ ಬೀಳುತ್ತವೆ.

ಈಗ ಗಿಡದ ತುಂಬ ಹಸಿರು ಎಲೆಗಳು. ಈ ಎಲೆಗಳಲ್ಲಿ
ಸೇಬಿನ ಚಿಕ್ಕ ಕಾಯಿಗಳು. ಮೊಗ್ಗೆಗಳಿದ್ದಲ್ಲಿ
ಕಾಯಿಗಳಿರುತ್ತವೆ. ಸೇಬು ಕಾಯಿಗಳು ಹಸಿರು
ಬಣ್ಣದ್ದಿರುತ್ತವೆ. ಅವು ಬಹು ಚಿಕ್ಕವಿರುವದರಿಂದ
ಬರಿಗಣ್ಣಿಗೆ ಕಾಣಲಾರವು.
ಸೇಬು ಹಣ್ಣುಗಳು ನಿದಾನವಾಗಿ ಬೆಳೆಯುತ್ತವೆ.

ಇವೆಲ್ಲ ವಸಂತಋತುವಿನಲ್ಲಿ ಮತ್ತು ಬೇಸಿಗೆಯಲ್ಲಿ ಬೆಳೆಯುತ್ತವೆ.

ಚಳಿಗಾಲದಲ್ಲಿ ಕಾಯಿಗಳು ದೊಡ್ಡದಾಗಿ ಹಣ್ಣಾಗುತ್ತವೆ. ಅವುಗಳನ್ನು ನಾವು ಈಗ ತಿನ್ನಬಹುದು.

ನಾವೀಗ ಎಲೆಗಳನ್ನು ಮತ್ತು ಎಲೆಗಳಲ್ಲಿ ಅಡಗಿದ ಹಣ್ಣುಗಳನ್ನು ನೋಡಬಹುದು. ಕಾಂಡದಿಂದ ಟೊಂಗೆಗಳು ಹೊರಬಿದ್ದದ್ದನ್ನು ನಾವು ಕಾಣಬಹುದು. ಕಾಂಡವು ಭೂಮಿಯಿಂದ ಹೊರಬಂದದ್ದನ್ನು ನಾವು ನೋಡಬಹುದು. ಗಿಡದ ಕಾಂಡದ ಮೇಲಿನ ತೊಗಟೆಯನ್ನು ನಾವು ನೋಡಬಹುದು.
ತೊಗಟೆ ಕಾಂಡ ಮತ್ತು ಟೊಂಗೆಗಳಿಗೆ ಕವಚದಂತೆ ಇರುತ್ತದೆ.

ಗಿಡದ ಕೆಲ ಭಾಗಗಳನ್ನು ನಾವು ನೋಡಲಾರೆವು.
ನಾವು ಬೇರುಗಳನ್ನು ನೋಡಲಾರೆವು.
ಅವು ಭೂಮಿಯ ಕೆಳಗೆ ಇರುತ್ತವೆ.
ಕೆಲವು ಬೇರುಗಳು ಬಹು ದೊಡ್ಡದಾಗಿರುತ್ತವೆ.
ಕೆಲವು ಬೇರುಗಳು ಚಿಕ್ಕವಾಗಿದ್ದರೂ ಅವುಗಳ ಗೊಂಚಲು ಗೊಂಚಲಾಗಿ ಇರುತ್ತವೆ.
ಈ ಬೇರುಗಳು ಟೊಂಗೆಗಳಂತೆ ನೆಲದ ಕೆಳಗೆ ವಿಸ್ತರಿಸುತ್ತ ಬೆಳೆಯುತ್ತವೆ.

ಬೇರುಗಳಿಲ್ಲದೆ ಗಿಡವು ಜೀವಿಸಲು ಅಸಾಧ್ಯ.
ಬೇರುಗಳೇ ಕಾಂಡವನ್ನು ಗಟ್ಟಿಯಾಗಿ ಹಿಡಿದಿಡುತ್ತವೆ.
ಗಾಳಿ ಬಿಟ್ಟಾಗ ಗಿಡವು ಬೀಳದಂತೆ ಬೇರು ಹಿಡಿದಿಡುವದು.

ಮಳೆ ಬಿದ್ದಾಗ ಬೇರುಗಳು ಗಿಡವು ಹರಿದು ಹೋಗದಂತೆ ನೋಡಿಕೊಳ್ಳುವವು.
ಬೇರುಗಳು ಇದಕ್ಕಿಂತ ಒಂದು ಹೆಚ್ಚಿನ ಕೆಲಸವನ್ನು ಮಾಡುತ್ತವೆ. ಅವು ಭೂಮಿಯಲ್ಲಿಯ ನೀರನ್ನು ತೆಗೆದುಕೊಳ್ಳುತ್ತವೆ. ಈ ನೀರನ್ನು ಕಾಂಡಗಳಿಗೆ ಅದು ಮುಟ್ಟಿಸುತ್ತದೆ. ಕಾಂಡವು ಟೊಂಗೆಗಳಿಗೆ ನೀರನ್ನು ಮುಟ್ಟಿಸುತ್ತದೆ. .

ಟೊಂಗೆಗಳು ಎಲೆಗಳಿಗೆ ನೀರನ್ನು ಮುಟ್ಟಿಸುತ್ತವೆ. ನೂರಾರು ಗಟ್ಟಲೆ ಎಲೆಗಳು ಟೊಂಗೆಗಳ ಮೇಲೆ ಬೆಳೆಯುತ್ತವೆ. ಗಿಡಕ್ಕೆ ಬೇಕಾಗುವ ಆಹಾರವನ್ನು ಸೂರ್ಯನ ಬಿಸಿಲಿದ್ದಾಗ ಎಲೆಗಳು ತಯಾರಿಸುತ್ತವೆ. ಎಲೆಗಳು ನೀರು ಮತ್ತು ಹವೆಯಿಂದ ಆಹಾರವನ್ನು ತಯಾರಿಸುತ್ತವೆ. ಆಹಾರವು ಟೊಂಗೆಗಳಿಗೆ ಮುಟ್ಟುತ್ತದೆ. ಅಲ್ಲಿಂದ ಅದು ಕಾಂಡ ಮತ್ತು ಬೇರುಗಳಿಗೆ ತಲುಪುತ್ತದೆ. ಗಿಡದ ಎಲ್ಲ ಭಾಗಗಳಿಗೆ ಅದು ತಲುಪುತ್ತದೆ.

ಚಳಿಗಾಲ ಸಮೀಪಿಸುತ್ತದೆ. ಎಲೆಗಳ ಕಾರ್ಯ ಮುಗಿಯುತ್ತದೆ. ಎಲೆಗಳೆಲ್ಲ ಅರಿಶಿನ ಮತ್ತು ಕಂದು ಬಣ್ಣದ್ದಾಗುತ್ತವೆ. ಎಲೆಗಳು ನಿರ್ಜೀವವಾಗಿ ನೆಲದ ಮೇಲೆ ಬೀಳುತ್ತವೆ.

ಈಗ ಗಿಡವು ಪೂರ್ಣವಾಗಿ ಬರಿದಾಗುತ್ತದೆ. ಚಳಿಗಾಲದಲ್ಲಿ ಅದು ಸತ್ತು ಹೋದಂತೆ ಕಾಣುವದು.

ಆದರೆ ಅದು ಇನ್ನೂ ಸತ್ತಿಲ್ಲ. ತೊಗಟೆಯ ಕೆಳಗೆ ಅದು ಜೀವಂತವಾಗಿರುತ್ತದೆ.

ಮತ್ತೇ ಬೇಸಿಗೆ ಬರುತ್ತದೆ. ಮಳೆ ಬೀಳುತ್ತದೆ.

ಸೂರ್ಯನು ಭೂಮಿಯನ್ನು ಕಾಯಿಸುತ್ತಾನೆ. ಗಿಡಕ್ಕೆ ಚಿಗುರು ಬಿಡುತ್ತದೆ. ಹೊಸ ಎಲೆಗಳು ಹುಟ್ಟುತ್ತವೆ. ಗಿಡವು ಜೀವಂತವಿರುವವರೆಗೂ ಬೇಸಿಗೆಯಲ್ಲಿ ಸೇಬಿನ ಗಿಡದ ಮೇಲೆ ಮೊಗ್ಗೆ ಬರುತ್ತವೆ ಮತ್ತು ಅದರಿಂದ ಕಾಯಿ-ಹಣ್ಣುಗಳು ದೊರೆಯುತ್ತವೆ.



ನೀವು ಯಾವ ಕಾಲದಲ್ಲಿ ಸೇಬಿನ ಗಿಡವು ಚೆನ್ನಾಗಿದ್ದದ್ದನ್ನು ಕಾಣುವಿರಿ?



ಬೇಸಿಗೆಯಲ್ಲಿ ಮೊಗ್ಗೆಗಳು ಇದ್ದಾಗ?

ಅವು ಎಲೆಗಳಿಂದ ತುಂಬಿಕೊಂಡಾಗ ?

ಚಳಿಗಾಲದಲ್ಲಿ ಒಂದೂ ಎಲೆ ಇಲ್ಲದಿದ್ದಾಗ?

ಇಲ್ಲವೆ ಚಳಿಗಾಲದಲ್ಲಿ ಸೇಬಿನ ಹಣ್ಣುಗಳಿಂದ ತುಂಬಿಕೊಂಡಾಗ?

ಸಮಾಪ್ತ